ಭಾಷೆ ಕರ್ನಾಟಕದ ಸಿಂಹಾಸನವನ್ನು ಏರಿ ಜನರ ಆಶೋತ್ತರಗಳನ್ನು ಈಡೇರಿಸುವುದು ಕರ್ನಾಟಕತ್ವದ ಗುರಿಯಾಗಿತ್ತು.

ಸ್ವಾತಂತ್ರ್ಯ ಪೂರ್ವದಿನಗಳಲ್ಲಿ ಪ್ರಾದೇಶಿಕ ಭಾಷೆಗಳು ರಾಷ್ಟ್ರೀಯತೆಯೊಡನೆ ಸಮೀಕರಣಗೊಂಡಿದ್ದರೂ, ಸ್ವಾತಂತ್ರ್ಯಾನಂತರ ಈ ಭಾಷೆಗಳು ರಾಷ್ಟ್ರೀಯತೆಗೆ ವಿರೋಧವೆಂಬ ಭಾವನೆ ರಾಜಕೀಯವಾಗಿಯಾದರೂ ಬೆಳೆದದ್ದು ಒಂದು ವಿಪರ್ಯಾಸ. ಕನ್ನಡ, ಕರ್ನಾಟಕ ಎಂಬ ಮಾತುಗಳು ಕೆಲವು ವಲಯಗಳಲ್ಲಾದರೂ ಈಗ ಪ್ರಾದೇಶಿಕತೆ, ಸಂಕುಚಿತತೆಗಳಿಗೆ ಸಮಾನವಾಗಿ ಪರಿಗಣಿಸಲ್ಪಡುತ್ತವೆ. ಈ ಭಾಷೆಗಳು ಇಲ್ಲದೆ ಪ್ರದೇಶಗಳ ಅಭ್ಯುದಯವಿಲ್ಲ. ಪ್ರದೇಶಗಳ ಅಭ್ಯುದಯ ಇಲ್ಲದೆ ರಾಷ್ಟ್ರದ ಬೆಳವಣಿಗೆಯಿಲ್ಲ. ಒಂದು ರಾಷ್ಟ್ರ. ಒಂದು ಭಾಷೆ ಮುಂತಾದ ಯುರೋಪಿನ ಹಳೆಯ ರಾಷ್ಟ್ರೀಯತೆ ಕಲ್ಪನೆ ಭಾರತದಂಥ ದೇಶದಲ್ಲಿ ಅಸ್ತಿತ್ವಕ್ಕೆ ಬರುವುದು ಸಾಧ್ಯವಿಲ್ಲ. ವೈವಿಧ್ಯದಲ್ಲಿ ಏಕತೆಯನ್ನು ಸಾಧಿಸಬೇಕಾದ ಈ ದೇಶದಲ್ಲಿ ರಾಷ್ಟ್ರೀಯತೆಗೆ ಬಲ ಬರುವುದು ಪ್ರಾದೇಶಿಕತೆಯ ಮೂಲಕ ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಪ್ರಬಲವಾದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮೊದಲಾದವುಗಳಿಂದಲೇ ಪ್ರಬಲವಾದ ಭಾರತದ ಸಿದ್ಧಿ. ವಾಸ್ತವವಾಗಿ ಈ ವಿವಿಧ ರಾಜ್ಯಗಳ ಸಮಷ್ಟಿಯೇ ಭಾರತ. ಇವುಗಳನ್ನುಳಿದು ಭಾರತ ಎನ್ನುವುದು ಅಮೂರ್ತವಾದ ಕಲ್ಪನೆ. ಅದಕ್ಕೆ ಅರ್ಥವೇ ಇಲ್ಲ. ಆದುದರಿಂದ ಭಾರತದ ಹಿತವನ್ನು ಲಕ್ಷಿಸುವವರು ಪ್ರದೇಶಿಕ ಹಿತಗಳನ್ನು ಲಕ್ಷಿಸದಿರುವುದು ಸಾಧ್ಯವಿಲ್ಲ. ಪ್ರಾದೇಶಿಕ ಹಿತಗಳು ಅಲ್ಲಿನ ಜನರು, ಸಂಸ್ಕೃತಿ, ಭಾಷೆ, ಸಾಹಿತ್ಯಗಳಿಂದ ಪೋಷಿಸಲ್ಪಡಬೇಕು. ಕೇಂದ್ರದ ಕರ್ತವ್ಯ ಏನಿದ್ದರೂ ರಾಷ್ಟ್ರದ ರಕ್ಷಣೆ, ಸಮಗ್ರತೆಗಳನ್ನು ಕಾಯ್ದುಕೊಳ್ಳುವುದು ಮುಖ್ಯವಾಗಿರಬೇಕು. ತನ್ನನ್ನು ಅದು ರಾಜ್ಯಗಳ ಮೇಲೆ ಹೇರಿಕೊಳ್ಳಬಾರದು. ಈಗ ರಾಷ್ಟ್ರದ ಹಿತಗಳನ್ನು ಅಷ್ಟಾಗಿ ಗಮನಿಸದೆ ಕೇಂದ್ರ ರಾಜ್ಯಗಳ ಮೇಲೆ ತನ್ನ ಹತೋಟಿಯನ್ನು ಬಿಗಿಗೊಳಿಸುತ್ತಿರುವುದು ಶುಭಸೂಚನೆಯಲ್ಲ. ಕೇಂದ್ರದ ಈ ಮನೋಭಾವನೆಯಿಂದಾಗಿ ಪ್ರಾದೇಶಿಕ ಅಗತ್ಯಗಳು ಎಷ್ಟೋ ಸಲ ಅಲಕ್ಷಿತವಾಗುತ್ತಿವೆ. ಭಾಷೆಗೆ ಸಂಬಂಧಿಸಿದಂತೆ ಇದು ಸ್ಪಷ್ಟಗೊಳ್ಳುತ್ತಿದೆ.

ಬಹುಭಾಷೆಗಳ ಈ ದೇಶದಲ್ಲಿ ಒಂದು ಸಂಪರ್ಕ ಭಾಷೆಯ ಅಗತ್ಯವಿದೆ. ಆ ಭಾಷೆ ಯಾವುದಾಗಿರಬೇಕು ಎಂಬ ಪ್ರಶ್ನೆ ಇನ್ನೂ ಜೀವಂತವಾಗಿದೆ. ಹಿಂದಿ–ಇಂಗ್ಲೀಷುಗಳ ನಡುವೆ ಪೈಪೋಟಿ ಇದೆ. ಮಿಥ್ಯೆ ಇರಲಿ, ಸತ್ಯವಾಗಿರಲಿ ಹಿಂದೀ ಆಡುಗರ ಸಂಖ್ಯೆ ಮಿಕ್ಕ ಭಾಷೆಗಳ ಆಡುಗರ ಸಂಖ್ಯೆಗಿಂತ ದೊಡ್ಡದಾಗಿರುವುದೇನೋ ನಿಜ. ಆ ಬಲದ ಮೇಲೆ ಹಿಂದಿಯನ್ನು ಇಡೀ ದೇಶದ ಮೇಲೆ ಹೇರುವ ಪ್ರಯತ್ನಗಳಾಗುತ್ತಿವೆ. ಈ ಹಿಂದೀ ಎನ್ನುವುದು ಕೇಂದ್ರ ರಾಜ್ಯಗಳ ನಡುವಿನ ಕೊಂಡಿಯಾಗಿಯಷ್ಟೇ ಇರ ಬಯಸಿದ್ದರೆ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಆದರೆ ಅದು ಪ್ರಾದೇಶಿಕ ಭಾಷೆಗಳ ಸ್ಥಾನವನ್ನೂ ಆಕ್ರಮಿಸಲು ಮುಂದಾಗಿರುವುದರಿಂದ ಆ ಹಿಂದೀ ರಾಜ್ಯಗಳಲ್ಲಿ ಅದನ್ನು ವಿರೋಧಿಸಲು, ತಮಿಳುನಾಡಿನಂಥ ರಾಜ್ಯಗಳಲ್ಲಿ ಅದನ್ನು ದ್ವೇಷಿಸಲು ಆಸ್ಪದವಾಗಿದೆ. ಕೇಂದ್ರ ತನ್ನ ವ್ಯವಹಾರಗಳಲ್ಲಿ ಆಯಾರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಗಳನ್ನು ಗೌರವಿಸುವುದನ್ನು ಕಲಿಯದ ಹೊರತು ಭಾಷಾಸಮಸ್ಯೆಗೆ ಪರಿಹಾರವಿಲ್ಲ. ಬ್ಯಾಂಕುಗಳು, ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆ, ಕಾರ್ಖಾನೆಗಳು, ಇತರ ಕೇಂದ್ರ ಕಚೇರಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಅಲ್ಲಿನ ಭಾಷೆಗಳಿಗೇ ಆದ್ಯಗಮನ ಕೊಡಬೇಕು. ಇಲ್ಲದಿದ್ದರೆ ಹಿಂದಿ ಬಾರದ ಜನ ಎರಡನೆಯ ದರ್ಜೆ ನಾಗರಿಕರಾಗುತ್ತಾರೆ. ಪ್ರಾದೇಶಿಕತೆಯನ್ನು ಗೌರವಿಸಿದಾಗ